ಮೈಸೂರ ಗೆಜೆಟ್.

ಸಂ. 44.] ಸರ್ಕಾರದಿಂದ ಪ್ರಾಯಿಷ್ ಆದ). [ನಂ. 1.

ಬೆಂಗಳೂರು, ಗುರುವಾರ, ಜನವರಿ ತಾ। 7, ಸ್ 1909

II ನ ಭಾಗ.

ಇಂಡ್ಯಗವರ್ಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್ರೀರು ವಗ್ರೈರೀರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಮೈಸೂರು ರೆವಿನ್ಯೂ ಸರ್ವೆ ಮತ್ತು ಸೆಟ್ಲ್‌ಮೆಂಟ್ ಡಿಪಾರ್ಟ್‌ಮೆಂಟು.

ಇಸ್ತಿಹಾರ್‌ನಾಮೆ.

ನಂಬರ್ 426, ತಾರೀಖು 11ನೆ ಡಿಸೆಂಬರ್ 1908.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಶಿವಮೊಗ್ಗ ಡಿಸ್ಟ್ರಿಕ್ಟ್ ಶಿಕಾರಿಪುರದ ತಾಲ್ಲೂಕಿಗೆ ಸೇರಿದ 174 ಸರಕಾರಿ ಗ್ರಾಮಗಳಿಗೆ ರಿವಿಜ್ ಯಾನೆ ತಿದ್ದುಪಡಿಯಾದ ಆಕಾರವನ್ನು ಗವರ್ನ್‌ಮೆಂಟಿನವರು ಮಂಜೂರ್ಮಾಡಿರುವದರಿಂದ ಮೈಸೂರು ಲ್ಯಾಂಡ್ ರೆವಿನ್ಯೂ ಕೋಡ್ 113ನೆ ಸೆಕ್ಷನ್ ಪ್ರಕಾರ ಸದರಿ ತಿದ್ದುಪಡಿಯಾದ ಆಕಾರವನ್ನು ಫಾಯಿಷ್ ಮಾಡತಕ್ಕ ರಿವಿಜ್ ಸೆಟ್ಲ್‌ಮೆಂಟ್ ಕೆಲಸವು ಕಸಬಾ ಶಿಕಾರಿಪುರದ ಮೊಕ್ಕಾಂನಲ್ಲಿ 1909ನೆ ಜನವರಿ ತಾರೀಖು 11 ರಲ್ಲು ಅಥವಾ ಆ ಸುಮಾರಿಗೆ ಪ್ರಾರಂಭಿಸಲ್ಪಡುವದು

ಡಿ. ಶಾಮರಾವ್,
ರೆವಿನ್ಯೂ ಸರ್ವೆ ಮತ್ತು ಸೆಟ್ಲ್‌ಮೆಂಟ್ ಸೂಪರ್‌ಟಿಂಡೆಂಟ್.

ಫಾರೆಸ್ಟ್ ಇಲಾಖೆ.

ಇಸ್ತಿಹಾರ್.

ತಾರೀಖು 31ನೆ ಡಿಸೆಂಬರ್ 1908.

ಇದರಿಂದ ತಿಳಿಯಪಡಿಸುವುದೇನಂದರೆ—ಈ ಕೆಳಗೆ ನಮೂದಿರತಕ್ಕ ಮಾಲುಗಳು ಚೆನ್ನಗಿರಿ ರೇಂಜ್ ಕುಕ್ವಾಡ ಉಬ್ರಾಣಿ ಮನ್ನೆ ಮತ್ತು ಡಿಸ್ಟ್ರಿಕ್ಟ್ ಜಂಗ್ಲಿಯಲ್ಲಿ ಸಿಕ್ಕಿವೆ. ಯಾರಾದರೂ ವಾರಸ್ದಾರರು ಇದ್ದರೆ ಈ ಇಸ್ತಿಹಾರ್ ತಾರೀಖಿನಿಂದ ಒಂದು ತಿಂಗಳು ವಾಯಿದೆ ಒಳಗೆ ಶಿವಮೊಗ್ಗ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರ ರೂಬು ರೂಬು ಹಾಜರಾಗಬೇಕು. ಹಾಗೆ ಯಾರೂ ಹಾಜರಾಗದೇ ಇದ್ದರೆ ಸದರಿ ಮಾಲುಗಳು ಸರ್ಕಾರಿಕ್ಕೆ ಸೇರಿಸಲ್ಪಡುತ್ತೆ. ನಂತರ ಯಾವ ಹಕ್ಕೂ ಅಂಗೀಕರಿಸಲ್ಪಡುವುದಿಲ್ಲಾ.

ಮಾಲಿನ ವಿವರ.	ಅದದು.	ಸಲೆ ಅಡಿ	ಎಲ್ಲಿ ಸಿಕ್ಕಿದ್ದು.	ಯಾರ ಸುಪರ್ದಿನಲ್ಲಿದೆ.
ಚಕಡೀ ಗಾಡಿ (ಎರಡು ಎತ್ತಿನದು).	1	...	ಕುಕ್ವಾಡ ಉಬ್ರಾಣಿ ಮನ್ನೆ ಜಂಗ್ಲಿ ಶಿವಮೊಗ್ಗ ಡಿಸ್ಟ್ರಿಕ್ಟ್.	ಲಕೆ ಹಳ್ಳಿ ಪಟೇಲ್ ಕರಿಬಸಪ್ಪ
ಸಾಗುವಾನಿ ಬೆಲಗು ...	7	38½	ಡಿಟೋ ...	ಡಿಟೋ
ಡಿಟೋ ...	2	7½	ಮುರುವಂಜಿ ಡಿಸ್ಟ್ರಿಕ್ಟ್ ಜಂಗ್ಲಿ ಚನ್ನಗಿರಿ ರೇಂಜ್.	ಮುರುವಂಜಿ ಪಟೇಲ ಮುರಳು ಸಿದ್ದಪ್ಪ.

ಎ. ಪೂನ್ನಸಾಮಿ ಮೊದಲಿಯಾರ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಶಿವಮೊಗ್ಗ ಡಿಸ್ಟ್ರಿಕ್ಟ್.

ತಾರೀಖು 20ನೆ ಡಿಸೆಂಬರ್ 1908.

ಈ ಕೆಳಗೆ ನಮೂದಿಸಿರುವ ಇಸ್ತಿಹಾರನ್ನು ಸರ್ವರ ತಿಳುವಳಿಕೆ ಬಗ್ಯೆ ಫಾಯಿಷ್‌ಮಾಡಿ ಇದೆ :—ಚಿತ್ರದುರ್ಗದ ಡಿಸ್ಟ್ರಿಕ್ಟಿನ ಈ ಕೆಳಗೆ ನಮೂದಿಸಿರುವ ಮನ್ನಾ ಜಂಗಲುಗಳು, ಮತ್ತು ಪ್ಲಾಂಟೇಷ್ಯಗಳು, 1909ನೆ ಇಸವಿ ಜನವರಿ ಮಾಹೆ 1ರ ಲಾಗಾಯತು 1909ನೆ ಇಸವಿ ಜೂನ್ ಆಖೈರು ವರೆಗೆ ಬೇಟೆ, ಷಿಕಾರಿ, ವಗೈರೆ ಕೆಲಸಗಳು ಮಾಡದಂತೆ ಬಂದುಮಾಡಿ ಇರುತ್ತೆ. ಸದರಿ ಮನ್ನಾ ಜಂಗಲು ಮತ್ತು ಪ್ಲಾಂಟೇಷ್ಯಗಳನ್ನು ಮೈಸೂರು ಸೀಮೆಯ ಕ್ಯಸರ್ವೇಟರ್ ಸಾ॥ ರವರಿಂದಲಾಗಲಿ ಅಥವಾ ಅಧಿಕಾರ ಹೊಂದಿದ ಇತರ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರಿಂದಲಾಗಲಿ ಕ್ರಮವಾಗಿ ಅಧಿಕಾರ ಹೊಂದದ ಯಾವ ಮನುಷ್ಯನು ಪ್ರವೇಶಿಸಕೂಡದು. ಅಕ್ರಮವಾಗಿ ಪ್ರವೇಶ ಮಾಡಿದವರನ್ನು 1900ನೆ ಇಸವಿ XIನೆ ಫಾರೆಸ್ಟ್ ರೆಗ್ಯುಲೇಷ್ಯ 24ನೆ ಸೆಕ್ಷ್ಯ ಪ್ರಕಾರ ಶಿಕ್ಷೆಗೆ ಗುರಿಪಡಿಸಲಾಗುವದು.

2. ಸ್ಟೇಟ್ ಫಾರೆಸ್ಟಿನಲ್ಲಿ ಯಾವ ಹಕ್ಕನ್ನಾದರೂ ಚಲಾಯಿಸುವ ಅಥವಾ ಅಂತಾ ಫಾರೆಸ್ಟಿನಲ್ಲಿ ಮರಮುಟ್ಟನ್ನು ಕಡದು ಸಾಗಿಸಲು ಅಥವಾ ದನಕರುವನ್ನು ಮೇಯಿಸಲು ಅಥವಾ ಅಲ್ಲಿಂದ ಯಾವದಾದರೂ ಫಾರೆಸ್ಟೋತ್ಪತ್ತಿಯನ್ನು ತೆಗದುಕೊಳ್ಳಲು ಅಪ್ಪಣೆ ಪಡೆದ ಪ್ರತಿ ಮನುಷ್ಯನು, ಆ ಸ್ಟೇಟ್ ಫಾರೆಸ್ಟಿನಲ್ಲಿ ಯಾರಾದರೂ ಅವನ ಚಾಕರೀಲಿರುವ ಪ್ರತಿ ಮನುಷ್ಯನು, ಮತ್ತು ಸರ್ಕಾರದ ನೌಕರೀಲಿರುವ ಅಂತಾ ಫಾರೆಸ್ಟಿಗೆ ಹತ್ತರದ ಯಾವದಾದರೂ ಗ್ರಾಮದಲ್ಲಿರುವ ಪ್ರತಿ ಮನುಷ್ಯನು ಅಥವಾ ಆ ಗ್ರಾಮದ ಪ್ರತಿ ನೌಕರನೂ ಅನವಶ್ಯಕವಾದ ಸಾವಕಾಶವಿಲ್ಲದೆ ಅಂತಾ ಫಾರೆಸ್ಟಿನಲ್ಲಿ ಅಥವಾ ಅದರ ಸಮೀಪದಲ್ಲಿ ಬೆಂಕಿಬಿದ್ದ ವಿಚಾರವಾಗಿಯಾಗಲೀ ಯಾವದಾದರೂ ಫಾರೆಸ್ಟು ತಕ್ಸೀರ್ ನಡದ ಅಥವಾ ನಡಿಸಬೇಕೆಂಬ ಉದ್ದೇಶ್ಯದ ವಿಚಾರವಾಗಿಯಾಗಲೀ ತನಗೆ ದೊರಕಿರಬಹುದಾದ ಯಾವ ವರ್ತಮಾನವನ್ನಾದರೂ ಅತ್ಯಂತ ಸಮೀಪದಲ್ಲಿರುವ ಫಾರೆಸ್ಟಾಫಿಸರಿಗೆ ಅಥವಾ ಪೊಲೀಸಾಫಿಸರಿಗೆ ಕೊಡಲು ಬದ್ಧನಾಗಿರತಕ್ಕದ್ದಲ್ಲದೆ ತನ್ನ ಸಹಾಯವನ್ನು ತಗಾದೆ ಮಾಡುವ ಯಾವ ಫಾರೆಸ್ಟು ಅಥವಾ ಪೊಲೀಸಾಫಿಸರಿಗಾಗಲೀ—

(a) ಅಂತಾ ಫಾರೆಸ್ಟಿನಲ್ಲಿ ಸಂಭವಿಸುವ ಯಾವ ಬೆಂಕಿಯನ್ನಾದರೂ ಆರಿಸೋಣದರಲ್ಲಿ,

(b) ಅಂತಾ ಫಾರೆಸ್ಟಿನ ಆಸ್ಪಾಸಿನಲ್ಲಿ ಸಂಭವಿಸಬಹುದಾದ ಯಾವ ಬೆಂಕಿಯಾಗಲೀ ಅಂತಾ ಫಾರೆಸ್ಟಿನೊಳಕ್ಕೆ ವಿಸ್ತರಿಸದಂತೆ ತಪ್ಪಿಸೋಣದರಲ್ಲಿ,

(c) ಅಂತಾ ಫಾರೆಸ್ಟಿನಲ್ಲಿ ಯಾವ ಫಾರೆಸ್ಟು ತಕ್ಸೀರು ನಡಿಯದಂತೆ ಅಡ್ಡಿ ಮಾಡೋಣದರಲ್ಲಿ, ಮತ್ತು

(d) ಅಂತಾಪ್ಪದ್ದು ಯಾವದಾದರೂ ತಕ್ಸೀರ್ ಅಂತಾ ಫಾರೆಸ್ಟಿನಲ್ಲಿ ನಡದಿರುತ್ತೆಂದು ನಂಬಲು ಕಾರಣವಿರುವಾಗ, ಆಪರಾಧಿಯನ್ನು ಕಂಡುಹಿಡಿದು ಅವನನ್ನು ದಸ್ತಗಿರಿ ಮಾಡೋಣದರಲ್ಲಿ ಸಹ ಕುಮ್ಮಕ್ಕಾಡತಕ್ಕದ್ದು. (1900ನೆ ಇಸವಿ 11ನೆ ಫಾರೆಸ್ಟು ರೆಗ್ಯುಲೇಷ್ಯ 29ನೆ ಸೆಕ್ಷ್ಯ.)

(a) ಸ್ಟೇಟು ಫಾರೆಸ್ಟು—

(1)	ಜೋಗಿಮಟ್ಟಿ ಮನ್ನಾ ಜಂಗಲಿ ಬಡಾವಣೆ ಸಹ ...	ಚಿತ್ರದುರ್ಗ, ಹಿರಿಯೂರು ಮತ್ತು ಹೊಳಲೆರೆ ತಾಲ್ಲೂಕುಗಳು.
(2)	ನೀರ್ಥಡಿ ಡಿಟೋ ...	ಚಿತ್ರದುರ್ಗ, ಹೊಳಲ್ಕೆರೆ ಮತ್ತು ದಾವಣಗೆರೆ ತಾಲ್ಲೂಕುಗಳು.
(3)	ಮಲೆ ಬೆನ್ನೂರು	ಹರಿಹರ ಸಬ್ ತಾಲ್ಲೂಕು, ಹೊನ್ನಾಳಿ ತಾಲ್ಲೂಕು.
(4)	ಕುದುರೆಕಣಿವೆ	ಹೊಸದುರ್ಗ, ಚಿಕ್ಕನಾಯಿಕನಹಳ್ಳಿ ತಾಲ್ಲೂಕುಗಳು.
(5)	ಕವುರಾಕಾವಲು	ಮೊಳಕಾಲ್ಮುರು ತಾಲ್ಲೂಕು.
(6)	ಹಿರೇ ಅಡವಿ	ಡಿಟೋ
(7)	ಸಂಜೀವರಾಯನಕೋಟೆ	ಡಿಟೋ
(8)	ಕೃಷ್ಣರಾಜಪುರ	ಡಿಟೋ
(9)	ಬಾಂಡರಾವಿ	ಡಿಟೋ
(10)	ರಂಗಯ್ಯನದುರ್ಗ	ಜಗಲೂರು ತಾಲ್ಲೂಕು.
(11)	ಅಣಬೂರು	ಡಿಟೋ
(12)	ದೇವರಗುಡ್ಡ	ಹೊಳಲ್ಕೆರೆ, ಹೊಸದುರ್ಗ ತಾಲ್ಲೂಕುಗಳು.
(13)	ಗರಗಾ ಕಾವಲು	ಹೊಳಲ್ಕೆರೆ ತಾಲ್ಲೂಕು
(14)	ಜಾನಕಲ್ಲು	ಹೊಳಲ್ಕೆರೆ, ಹೊಸದುರ್ಗ ತಾಲ್ಲೂಕುಗಳು.
(15)	ಲಕ್ಕಿಹಳ್ಳಿ	ಹಿರಿಯೂರು, ಹೊಸದುರ್ಗ ತಾಲ್ಲೂಕುಗಳು.
(16)	ಮಾರೀಕಣಿವೆ	ಡಿಟೋ
(17)	ಜೀವಿನಹಳ್ಳಿ	ಚಿತ್ರದುರ್ಗ, ದಾವಣಗೆರೆ ಮತ್ತು ಜಗಲೂರು ತಾಲ್ಲೂಕುಗಳು.

(b) ಪ್ಲಾಂಟೇಷ್ಯಗಳು—

(1)	ನೇರ್ಲಗುಂದಿ	ಚಿತ್ರದುರ್ಗ ತಾಲ್ಲೂಕು.
(2)	ಪಿಳ್ಳೇಕೆರೇನಹಳ್ಳಿ	ಡಿಟೋ
(3)	ಚಳ್ಳಕೆರೆ	ಚಳ್ಳಕೆರೆ ತಾಲ್ಲೂಕು.
(4)	ಮೊಳಕಾಲ್ಮುರು	ಮೊಳಕಾಲ್ಮುರು ತಾಲ್ಲೂಕು.
(5)	ಜಗಲೂರು ಕ್ಯಾಸರೀನಾ ಪ್ಲಾಂಟೇಷ್ಯ ...	ಜಗಲೂರು ತಾಲ್ಲೂಕು.

ವೈ. ಸೀತಾರಾಮಯ್ಯ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಚಿತ್ರದುರ್ಗ ಡಿಸ್ಟ್ರಿಕ್ಟ್.